# ಮೊದಲನೇ ಮೂರು ವರ್ಷಗಳಲ್ಲಿ – ಮಗುವಿನ ಬೆಳವಣಿಗೆ ಮೈಲಿಗಲ್ಲುಗಳು

## ಬೆಳವಣಿಗೆ ಮೈಲಿಗಲ್ಲುಗಳು



- ಒಂದು ಮಗುವಿನ ಬೆಳವಣಿಗೆಯನ್ನು ಅದರ ಬೆಳವಣಿಗೆ ಮೈಲಿಗಲ್ಲುಗಳ ಮೂಲಕ ತಿಳಿದುಕೊಳ್ಳಬಹುದಾಗಿದೆ.
- ಬೆಳವಣಿಗೆ ಮೈಲಿಗಲ್ಲುಗಳು ಎಂದರೆ ಮಗು ಹೇಗೆ ಬೆಳೆಯುತ್ತದೆ ಎಂಬುದರ ಬಗ್ಗೆ ನಮಗೆ ಪ್ರಗತಿ ಸೂಚಕ ಸಂಕೇತಗಳಾಗಿವೆ.
- ಪ್ರತಿಯೊಂದು ಮಗುವೂ ಕೂಡಾ ತನ್ನದೇ ಸ್ವಂತ ವೇಗದಲ್ಲಿ ಈ ಹಂತಗಳನ್ನು ದಾಟುತ್ತದೆ.
- ಈ ಬೆಳವಣಿಗೆ ಮೈಲಿಗಲ್ಲುಗಳು ನಿರ್ಧಿಷ್ಟವಾಗಿರುತ್ತವೆ ಹಾಗೂ ಸಾಮಾನ್ಯವಾಗಿ ಹೆಚ್ಚಿನ ಮಕ್ಕಳು ಒಂದೇ ಪ್ರಾಯದಲ್ಲಿ ಇವುಗಳನ್ನು ದಾಟುತ್ತವೆ.
- ಮಗುವಿನ ಯಾವುದೇ ಬೆಳವಣಿಗೆ ಹಂತದಲ್ಲಿ 2–3 ತಿಂಗಳುಗಳ ವಿಳಂಬ ಉಂಟಾಗುತ್ತದೆ ಎಂದು ಕಂಡು ಬಂದಲ್ಲಿ, ಆ ಮಗುವಿಗೆ ವೈದ್ಯಕೀಯ ಸಲಹೆ/ಬೆಳವಣಿಗೆ ಮಾಪನ ಮತ್ತು ಪೂರಕ ಬೆಂಬಲಗಳ ಅಗತ್ಯವಿದೆ ಎಂದು ಅರ್ಥ.









## ಬೆಳವಣಿಗೆಯ ಮೈಲಿಗಲ್ಲುಗಳನ್ನು ಸಾಧಿಸುವಲ್ಲಿ ನಿಮ್ಮ ಪಾತ್ರ:









| ಪ್ರಾಯ | ನೀವು ಮಾಡಬಹುದಾದ ಕಾರ್ಯಗಳು | ಮಕ್ಕಳ ಮಾಡಬಹುದಾದ ಕಾರ್ಯಗಳು |
|---|---|---|
| **0–3 ತಿಂಗಳುಗಳು** | * ಮಗುವಿನತ್ತ ಮುಗುಳ್ನಗಬೇಕು, ಮಗುವಿನ ಕಣ್ಣಿನತ್ತ ನೋಡಿ ಮಗುವಿನೊಂದಿಗೆ ಮಾತಾಡಬೇಕು.<br>* ನೋಡಲು, ಕೇಳಲು, ಅನುಭವಿಸಲು ಮತ್ತು ನಡೆದಾಡಲು ಮಗುವಿಗೆ ಸಹಾಯ ಮಾಡಬೇಕು. | * ಪ್ರತಿಕ್ರಿಯೆಗೆ ಮುಗುಳ್ನಗುತ್ತದೆ.<br>* ತೂಗಾಡುವ ರಿಬ್ಬನ್ ನೋಡುತ್ತದೆ.<br>* ಶಬ್ದ ಮಾಡಲು ಕಲಿಯುತ್ತದೆ. |
| **3–6 ತಿಂಗಳುಗಳು** | * ದೊಡ್ಡದಾದ ಬಣ್ಣ ಬಣ್ಣದ ವಸ್ತುಗಳನ್ನಿರಿಸಬೇಕು ಮಗು ಅದನ್ನು ನೋಡಬೇಕು ಮತ್ತು ಅದರತ್ತ ಹೋಗಬೇಕು.<br>* ನಿಮ್ಮ ಮಗುವಿನಿಂದ ಪ್ರತಿಕ್ರಿಯೆ ಪಡೆಯುವುದಕ್ಕಾಗಿ ಅದರೊಂದಿಗೆ ಮಾತಾಡಬೇಕು. ಶಬ್ದಗಳು ಮತ್ತು ಭಂಗಿಗಳ ಮೂಲಕ ಸಂಭಾಷಣೆ ಮುಂದುವರಿಯಬೇಕು. | * ಮೇಲೆ ನೊಡುತ್ತಾ ತಲೆ ಎತ್ತಲು ಕಲಿಯುತ್ತದೆ.<br>* ಧ್ವನಿ ಕೇಳಿದತ್ತ ತಿರುಗುತ್ತದೆ.<br>* ವಸ್ತುಗಳತ್ತ ತಲುಪುತ್ತದೆ. |
| **ಸುಮಾರು 9 ತಿಂಗಳುಗಳಲ್ಲಿ** | * ಆಡಲು ಮತ್ತು ಶಬ್ದ ಮಾಡುವುದಕ್ಕಾಗಿ ನಿಮ್ಮ ಮಗುವಿಗೆ ಸ್ವಚ್ಛವಾದ ವಸ್ತುಗಳನ್ನು ಕೊಡಬೇಕು.<br>* "ಒಂದು–ವಸ್ತುವನ್ನು–ಹುಡುಕು" ಎಂಬಂತೆ ಆಟಗಳನ್ನು ಆಡಬೇಕು.<br>* ವಸ್ತುಗಳು ಮತ್ತು ಜನರ ಹೆಸರುಗಳನ್ನು ಮಗುವಿಗೆ ಕಲಿಸಬೇಕು. | * ಮಲಗಿದಲ್ಲಿಂದ ಎದ್ದು ಕುಳಿತುಕೊಳ್ಳುತ್ತದೆ.<br>* ಹೆಬ್ಬೆರಳು ಮತ್ತು ತೋರು ಬೆರಳುಗಳಿಂದ ವಸ್ತುವನ್ನು ಹೆಕ್ಕುತ್ತದೆ.<br>* ಬೆಂಬಲವಿಲ್ಲದೆ ಕುಳಿತುಕೊಳ್ಳುತ್ತದೆ. |
| **ಸುಮಾರು 1 ವರ್ಷದಲ್ಲಿ** | | * ಬೆಂಬಲವಿಲ್ಲದೆ ನಿಂತುಕೊಳ್ಳುತ್ತದೆ.<br>* ಕೈ ಬೀಸುತ್ತದೆ.<br>* ಅಪ್ಪ/ಅಮ್ಮ ಅಂತ ಹೇಳುತ್ತದೆ. |
| **ಸುಮಾರು 1½ ವರ್ಷದಲ್ಲಿ** | * ಮಗುವಿಗೆ ಚಿಕ್ಕದಾದ ತುಂಬಾ ವಸ್ತುಗಳನ್ನು ಕೊಡಬೇಕು ಮತ್ತು ಅವುಗಳನ್ನು ದೊಡ್ಡ ಪಾತ್ರೆಗೆ ಹಾಕುವುದು ಮತ್ತು ತೆಗೆಯುವುದು ಕಲಿಸಬೇಕು.<br>* ನಿಮ್ಮ ಮಗುವಿಗೆ ಸರಳವಾದ ಪ್ರಶ್ನೆಗಳನ್ನು ಕೇಳಬೇಕು. ನಿಮ್ಮ ಮಗುವಿನ ಮಾತನಾಡುವ ಪ್ರತಿಕ್ರಿಯೆಗೆ ಸ್ಪಂಧಿಸಬೇಕು. | * ಇಚ್ಛೆಯನ್ನು ವ್ಯಕ್ತಪಡಿಸುತ್ತದೆ.<br>* 3 ತುಂಡುಗಳನ್ನು ಒಂದು ಕಪ್‌ಗೆ ಹಾಕುತ್ತದೆ.<br>* ಚೆನ್ನಾಗಿ ನಡೆಯುತ್ತದೆ. |
| **ಸುಮಾರು 2 ವರ್ಷದಲ್ಲಿ** | | * ಸ್ವಂತ ಕಾಲಿನಲ್ಲಿ ಸಹಾಯದಿಂದ ನಿಲ್ಲುತ್ತದೆ.<br>* ಇನ್ನೊಂದು ಹೊಸ ಶಬ್ದ ಹೇಳುತ್ತದೆ.<br>* ಮನೆ ಕೆಲಸ ಕೆಲಸಗಳನ್ನು ಅನುಸರಿಸುತ್ತದೆ. |
| **ಸುಮಾರು 2½ ವರ್ಷದಲ್ಲಿ** | * ವಸ್ತುಗಳನ್ನು ಲೆಕ್ಕ ಮಾಡಲು ಮತ್ತು ಹೋಲಿಸಲು ನೆರವಾಗಬೇಕು; ನಿಮ್ಮ ಮಗುವಿಗಾಗಿ ಸರಳವಾದ ಆಟಿಕೆಗಳನ್ನು ತಯಾರು ಮಾಡಬೇಕು.<br>* ನಿಮ್ಮ ಮಗುವಿಗೆ ಮಾತನಾಡಲು ಪ್ರೋತ್ಸಾಹಿಸಬೇಕು ಮತ್ತು ಅದಕ್ಕೆ ನೀವು ಪ್ರತಿಕ್ರಯಿಸಬೇಕು. ನಿಮ್ಮ ಮಗುವಿಗೆ ಕಥೆಗಳು, ಹಾಡುಗಳು ಮತ್ತು ಆಟಗಳನ್ನು ಕಲಿಸಬೇಕು. | * ಶರೀರದ 4 ಭಾಗಗಳನ್ನು ಗುರುತಿಸಿ ತಿಳಿಸುತ್ತದೆ.<br>* ಸ್ವಲ್ಪ ಚೆಲ್ಲುತ್ತಾ ತಾನಾಗಿ ಊಟ ಮಾಡುತ್ತದೆ.<br>* ಒಂದು ಬಣ್ಣವನ್ನು ಸರಿಯಾಗಿ ತಿಳಿಸುತ್ತದೆ. |
| **ಸುಮಾರು 3 ವರ್ಷದಲ್ಲಿ** | | * ನಕಲು ಮಾಡುತ್ತದೆ ಮತ್ತು ನೇರ ಗೆರೆ ಹಾಕುತ್ತದೆ.<br>* ತಾನಾಗಿಯೇ ಕೈ ತೊಳೆಯುತ್ತದೆ.<br>* 4 ವಸ್ತುಗಳಲ್ಲಿ 3 ರ ಹೆಸರು ತಿಳಿಸುತ್ತದೆ. |